JULY 18, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ರಾಣಿ ಚನ್ನಮ್ಮನವರ, ಕಿತ್ತೂರು ಕೋಟೆ ಆವರಣದಲ್ಲಿ, ಥೀಮ್ ಪಾರ್ಕ್; ಸಚಿವ ಸಂಪುಟ ಅನುಮೋದನೆ.**
- **'ಸ್ವಚ್ಛ ಸರ್ವೇಕ್ಷಣ ಅಭಿಯಾನ'; ಮೈಸೂರು, ರಾಷ್ಟ್ರಕ್ಕೆ ಮೂರನೇ ಸ್ಥಾನ; ರಾಜ್ಯದ ಭರವಸೆಯ ಸ್ವಚ್ಛ ಶಹರ, ದಾವಣಗೆರೆ.**
- **ಅಮೃತ ಭಾರತ ಯೋಜನೆ; ಸ್ವಾತಂತ್ರ್ಯ ಪೂರ್ವದ, ದೊಡ್ಡಬಳ್ಳಾಪುರ ರೈಲು ನಿಲ್ದಾಣ, ಮೇಲ್ದರ್ಜೆಗೆ.**
- **ಗಂಗಾವತಿ ತಾಲೂಕು, ಬೆಣಕಲ್ಲ ಗ್ರಾಮದ, ಕತ್ತೆಕಲ್ಲು ಗುಡ್ಡದಲ್ಲಿ, ತಾಮ್ರ ಯುಗದ ಕುರುಹು ಪತ್ತೆ.**

<><><>

**ಈಗ ವಾರ್ತೆಗಳ ವಿವರ**

<><><>

**ಬೆಳಗಾವಿ ಜಿಲ್ಲೆ, ಕಿತ್ತೂರು ತಾಲೂಕಿನ, ಕಿತ್ತೂರು ಕೋಟೆ ಆವರಣದಲ್ಲಿ, 30 ಕೋಟಿ ರೂಪಾಯಿ ವೆಚ್ಚದಲ್ಲಿ, ಥೀಮ್ ಪಾರ್ಕ್ ನಿರ್ಮಾಣ ಕಾಮಗಾರಿಗೆ, ಸಚಿವ ಸಂಪುಟ ಅನುಮೋದಿಸಿದೆ ಎಂದು, ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ. ಪಾಟೀಲ ತಿಳಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ, ಬೆಂಗಳೂರಿನಲ್ಲಿ ಸಚಿವ ಸಂಪುಟ ಸಭೆ ನಡೆಯಿತು.**

<><><>

**ರಾಯಚೂರು ತಾಲೂಕಿನಲ್ಲಿ, 24 ಕೋಟಿ 50 ಲಕ್ಷ ರೂಪಾಯಿ ವೆಚ್ಚದಲ್ಲಿ, ಖಾಸಗಿ ಸಹಭಾಗಿತ್ವದ ನೂತನ ಜವಳಿ ಪಾರ್ಕ್ ಸ್ಥಾಪನೆ,**

**ಹಾವೇರಿ ಜಿಲ್ಲೆ, ಹಾನಗಲ್ ತಾಲೂಕು, ಯಳವಟ್ಟಿ ಗ್ರಾಮದಲ್ಲಿ, 35 ಕೋಟಿ ರೂಪಾಯಿ ವೆಚ್ಚದಲ್ಲಿ, 28 ಎಕರೆ ವಿಸ್ತೀರ್ಣದ, ಮಾವು ಮತ್ತು ಇತರೆ ತೋಟಗಾರಿಕೆ ಬೆಳೆಗಳ, ನಿರ್ವಹಣಾ ಘಟಕ ನಿರ್ಮಾಣ,**

**ಕೊಪ್ಪಳ ಜಿಲ್ಲೆ, ಕನಕಗಿರಿ ತಾಲೂಕು, ಸಿರಿವಾರ ಗ್ರಾಮದಲ್ಲಿ, 83 ಕೋಟಿ 79 ಲಕ್ಷ ರೂಪಾಯಿ ವೆಚ್ಚದಲ್ಲಿ, ತೋಟಗಾರಿಕೆ ತಂತ್ರಜ್ಞಾನ ಪಾರ್ಕ್ ಸ್ಥಾಪನೆ,**

ಹಂಪಿ, ಬಾದಾಮಿ, ಐಹೊಳೆ, ಪಟ್ಟದಕಲ್ಲು ಹಾಗೂ ವಿಜಯಪುರ ಒಳಗೊಂಡಂತೆ, ಉತ್ತರ ಕರ್ನಾಟಕದ ಪ್ರವಾಸಿ ವೃತ್ತವನ್ನು, 166 ಕೋಟಿ 22 ಲಕ್ಷ ರೂಪಾಯಿ ವೆಚ್ಚದಲ್ಲಿ, ಅಭಿವೃದ್ಧಿಪಡಿಸಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ರಾಜ್ಯದಲ್ಲಿ ಪರಮಾಣು ವಿದ್ಯುತ್ ಸ್ಥಾವರ ಸ್ಥಾಪಿಸಲು ತಾತ್ವಿಕ ಅನುಮೋದನೆ ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮ ಹಾಗೂ ಎನ್.ಟಿ.ಪಿ.ಸಿ. ಗುರುತಿಸಿರುವ, ಸ್ಥಳಗಳಲ್ಲಿ ಪ್ರಾಥಮಿಕ ಅಧ್ಯಯನ ನಡೆಸಲು ಸಚಿವ ಸಂಪುಟ ಅನುಮತಿಸಿದೆ ಎಂದು, ಸಚಿವ ಎಚ್.ಕೆ. ಪಾಟೀಲ ಹೇಳಿದರು.

<><><>

'ಏರೋ ಸ್ಪೇಸ್ ಪಾರ್ಕ್' ಅನ್ಯ ರಾಜ್ಯದ ಪಾಲಾಗದಂತೆ, ಉತ್ತರ ಕರ್ನಾಟಕ ಭಾಗದಲ್ಲಿ ಭೂಮಿ ಮಂಜೂರು ಮಾಡಲು, ಕ್ರಮ ವಹಿಸುವಂತೆ, ವಿಧಾನಸಭೆ ವಿಪಕ್ಷ ಉಪ ನಾಯಕ ಅರವಿಂದ ಬೆಲ್ಲದ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ. ಹುಬ್ಬಳ್ಳಿ–ಧಾರವಾಡ, ಬೆಳಗಾವಿ ಅಥವಾ ಉತ್ತರ ಕರ್ನಾಟಕದ ಯಾವುದೇ ಭಾಗದಲ್ಲಿ ಸ್ಥಾಪಿಸಿದಲ್ಲಿ, ಯುವಜನರಿಗೆ ಉದ್ಯೋಗ ಸೃಷ್ಟಿಯಾಗಲಿದೆ ಎಂದಿದ್ದಾರೆ.

<><><>

ರಾಜ್ಯದ ಗಡಿ ಭಾಗದ ಸಮಸ್ಯೆಗಳಿಗೆ ಸಂಬಂಧಿಸಿ, ಕಾಳಜಿ ವಹಿಸಲು, ರಾಜ್ಯ ಸರ್ಕಾರ ಸಚಿವ ಎಚ್.ಕೆ.ಪಾಟೀಲ ಅವರನ್ನು ನೇಮಕ ಮಾಡಿದ್ದು, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ, ಹರ್ಷದಿಂದ ಸ್ವಾಗತಿಸುತ್ತದೆ ಎಂದು, ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ತಿಳಿಸಿದ್ದಾರೆ. ಮಹಾರಾಷ್ಟ್ರ ಸರ್ಕಾರ, ಗಡಿ ಭಾಗದ ಅಭಿವೃದ್ಧಿಗೆ ಸಂಬಂಧಿಸಿ, ಸಚಿವರನ್ನು ನೇಮಿಸಿದ್ದು, ಗಡಿಭಾಗದ ಕನ್ನಡಿಗರಲ್ಲಿ ಆತಂಕ ತಂದಿತ್ತು. ಸಹಜವಾಗಿ ಆಶಾ ಕಿರಣ ಮೂಡಿದೆ, ಎಂದು ಹೇಳಿದ್ದಾರೆ.

<><><>

2024–25ನೇ ಸಾಲಿನ, 'ಸ್ವಚ್ಛ ಸರ್ವೇಕ್ಷಣ ಅಭಿಯಾನ' ದಲ್ಲಿ, 3 ರಿಂದ 10 ಲಕ್ಷ ಜನಸಂಖ್ಯೆಯ ವಿಭಾಗದಲ್ಲಿ, ಮೈಸೂರು ರಾಷ್ಟ್ರಕ್ಕೆ ಮೂರನೇ ಸ್ಥಾನ ಪಡೆದಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಅವರಿಗೆ, ಹೊಸ ದಿಲ್ಲಿಯ ವಿಜ್ಞಾನ ಭವನದಲ್ಲಿ, ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ಆಯೋಜಿಸಿದ್ದ ಸಮಾರಂಭದಲ್ಲಿ, ಸ್ವಚ್ಛ ಸರ್ವೇಕ್ಷಣ ಪ್ರಶಸ್ತಿ, ಪ್ರದಾನ ಮಾಡಿ, ಗೌರವಿಸಿದರು.

<><><>

ಮೈಸೂರು ಮಹಾನಗರ ಪಾಲಿಕೆ, ಸ್ವಚ್ಛ ಸರ್ವೇಕ್ಷಣ ಜಾಗೃತಿಗಾಗಿ, ರಾಯಬಾರಿಗಳನ್ನು ನೇಮಿಸಿತ್ತು. ಸಾರ್ವಜನಿಕರ ಸಕಾಲಿಕ ಪ್ರತಿಕ್ರಿಯೆಗಾಗಿ ವಿಶೇಷ ಆ್ಯಪ್, ಶುಲ್ಕ ರಹಿತ ದೂರವಾಣಿ ಆರಂಭಿಸಿ, ಗಮನ ಸೆಳೆದಿದೆ.

<><><>

ಮೈಸೂರು ಮಹಾಗರ ಪಾಲಿಕೆಯ, ಮುಖ್ಯ ಆರೋಗ್ಯಾಧಿಕಾರಿ ಎಂ.ಪಿ. ವೆಂಕಟೇಶ, ಆಕಾಶವಾಣಿ ಮೂಲಕ, ಕೃತಜ್ಞತೆ ಸಲ್ಲಿಸಿದ್ದಾರೆ.

<><><>

ಎಂ.ಪಿ. ವೆಂಕಟೇಶ 42 ಸೆಕೆಂದುಗಳು

<><><>

ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ, ರಾಷ್ಟ್ರ ಮಟ್ಟದ ಪ್ರಶಸ್ತಿಗೆ, ರಾಜ್ಯದ ಭರವಸೆಯ ಸ್ವಚ್ಛ ಶಹರವಾಗಿ, ದಾವಣಗೆರೆ ಆಯ್ಕೆಯಾಗಿದೆ.

<><><>

ಸ್ವಚ್ಛ ಸರ್ವೇಕ್ಷಣೆಯಲ್ಲಿ, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ದೇಶಕ್ಕೆ 34ನೇ ಸ್ಥಾನ ಗಳಿಸಿದೆ. ರಾಜ್ಯಕ್ಕೆ ಈ ವರ್ಷವೂ 2ನೇ ಸ್ಥಾನ ಉಳಿಸಿಕೊಂಡು, ಉತ್ತಮ ಸಾಧನೆ ಮಾಡಿದೆ.

<><><>

ಈಗ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
**(1 ನಿ. 4 ಸೆ.)**

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ
ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಕೇಂದ್ರ ಸರ್ಕಾರ, ಕಳೆದ ಹತ್ತು ವರ್ಷಗಳಲ್ಲಿ, ರಾಜ್ಯದ ರೇಲ್ವೆ ಯೋಜನೆಗಳಿಗೆ ಹತ್ತು ಪಟ್ಟು ಹೆಚ್ಚುವರಿ ಅನುದಾನ ನೀಡಿದೆ; ಹಳೆಯ ರೈಲು ನಿಲ್ದಾಣಗಳನ್ನು, ಅಮೃತ ಭಾರತ ರೇಲ್ವೆ ನಿಲ್ದಾಣ ಯೋಜನೆಯಡಿ ಉನ್ನತೀಕರಿಸಲಾಗಿದೆ ಎಂದು, ಚಿಕ್ಕಬಳ್ಳಾಪುರ ಸಂಸದ ಕೆ.ಸುಧಾಕರ ತಿಳಿಸಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರದಲ್ಲಿ, ಅಮೃತ ಭಾರತ ಯೋಜನೆಯಡಿ ನಿರ್ಮಾಣಗೊಳ್ಳುತ್ತಿರುವ, ರೈಲು ನಿಲ್ದಾಣದ ಕಾಮಗಾರಿಗಳನ್ನು ಪರಿಶೀಲಿಸಿ, ಮಾತನಾಡಿದರು. ಸ್ವಾತಂತ್ರ್ಯ ಪೂರ್ವದ ದೊಡ್ಡಬಳ್ಳಾಪುರ ರೈಲು ನಿಲ್ದಾಣವನ್ನು, 25 ಕೋಟಿ ರೂಪಾಯಿ ವೆಚ್ಚದಲ್ಲಿ ಉನ್ನತೀಕರಿಸಲಾಗುತ್ತಿದೆ; ಪ್ರಯಾಣಿಕರಿಗೆ ಸಕಲ ಸೌಲಭ್ಯ, ಸರಕು ಸಾಗಣೆಗೆ ಒತ್ತು ನೀಡಲಾಗಿದೆ, ಎಂದರು.

<><><>

ಕೊಪ್ಪಳ ಜಿಲ್ಲೆ, ಗಂಗಾವತಿ ತಾಲೂಕು ಹಿರೇ ಬೆಣಕಲ್ಲ ಮತ್ತು ಚಿಕ್ಕ ಬೆಣಕಲ್ಲ ಗ್ರಾಮಗಳ ಮಧ್ಯದ, ಕತ್ತೆಕಲ್ಲು ಗುಡ್ಡದಲ್ಲಿ, ಮೂರು ಸಾವಿರ ವರ್ಷಗಳಷ್ಟು ಹಳೆಯ ಮತ್ತು ತಾಮ್ರ ಯುಗಕ್ಕೆ ಸೇರಿದ್ದು ಎಂದು, ಅಂದಾಜಿಸಲಾದ, ಆದಿಮಾನವರ ಗವಿ ಚಿತ್ರಗಳು ಮತ್ತು ಶಿಲಾ ಶಾಸನವನ್ನು ಇತಿಹಾಸ ಸಂಶೋಧಕರ ತಂಡ ಪತ್ತೆ ಹಚ್ಚಿದೆ. ಪ್ರಾಧ್ಯಾಪಕ ಶರಣಬಸಪ್ಪ ಕೋಲ್ಕಾರ, ಮಂಜುನಾಥ ದೊಡ್ಡಮನಿ, ಚಂದ್ರಶೇಖರ ಕುಂಬಾರ ಹಾಗೂ ನಾಗರಾಜ ಶಿವಪುರ, ಗಾಳಿ ದುರ್ಗಮ್ಮ ದೇವಸ್ಥಾನದಿಂದ, ಒಂದು ಕಿಲೋ ಮೀಟರ್ ಅಂತರದಲ್ಲಿ, ಕತ್ತೆಕಲ್ಲು ಗುಡ್ಡದ ಬಳಿ, ಐತಿಹಾಸಿಕ ಕುರುಹು ಪತ್ತೆ ಮಾಡಿದೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಶರಣಬಸಪ್ಪ ಕೋಲ್ಕಾರ.

<><><>

ಶರಣಬಸಪ್ಪ ಕೋಲ್ಕಾರ ಧ್ವನಿ 46 ಸೆಕೆಂದುಗಳು

<><><>

ಕೊಪ್ಪಳ ತಾಲೂಕಿನ ಮೆತಗಲ್ ಗ್ರಾಮದಲ್ಲಿ, ನಬಾರ್ಡ್ ವತಿಯಿಂದ ನಿರ್ಮಿಸುತ್ತಿರುವ, ಹಣ್ಣು ಬೆಳೆಗಳ ಸಂಸ್ಕರಣಾ ಘಟಕಕ್ಕೆ, ಜಿಲ್ಲಾಧಿಕಾರಿ ಸುರೇಶ ಇಟ್ನಾಳ ಭೇಟಿ ನೀಡಿ, ಪರಿಶೀಲಿಸಿದರು. ಯಲಬುರ್ಗಾ ತಾಲೂಕು ಮಾಟಲದಿನ್ನಿ ಗ್ರಾಮದಲ್ಲಿ, ಕೃಷಿ

ಭಾಗ್ಯ ಯೋಜನೆ, ಉದ್ಯೋಗ ಖಾತ್ರಿ ಯೋಜನೆ ಹಾಗೂ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ನಿರ್ಮಾಣಗೊಂಡ, ಕೃಷಿ ಹೊಂಡ ಮತ್ತು ದ್ರಾಕ್ಷಿ ಹಾಗೂ ದಾಳಿಂಬೆ ಬೆಳೆಗಳನ್ನು ವೀಕ್ಷಿಸಿದರು.

<><><>

ಕೃಷಿಕ ಬಸಯ್ಯ ಹಿರೇಮಠ ಅವರ ನುಗ್ಗೆಕಾಯಿ ಸಂಸ್ಕರಣ ಘಟಕ, ನೈಸರ್ಗಿಕ ಕೃಷಿಕ ದೇವಿಂದ್ರ ಬಳ್ಳುಟಗಿ ಅವರ ತೋಟಕ್ಕೆ ಭೇಟಿ ನೀಡಿ, ರೈತರೊಂದಿಗೆ ಅವರು ಚರ್ಚೆ ನಡೆಸಿದರು.

<><><>

'ಕನಕ ದೀಪ', ಬಾನುಲಿಯ 50 ಸಂಚಿಕೆಗಳ ಸಂಭ್ರಮದ ನಿಮಿತ್ತ, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ, ಕನಕ ಅಧ್ಯಯನ ಪೀಠ, ಕನಕ ಸಭಾ ಭವನದಲ್ಲಿ, ಇಂದು ಮಧ್ಯಾಹ್ನ 2.30ಕ್ಕೆ, ಗ್ರಂಥ ಬಿಡುಗಡೆ, ಕನಕ ಗೀತ ಗಾಯನ ಹಾಗೂ ಸತ್ಕಾರ ಸಮಾರಂಭ ಜರುಗಲಿದೆ ಎಂದು, ಕನಕ ಅಧ್ಯಯನ ಪೀಠದ ಸಂಯೋಜಕ ಸಿ. ಹನುಮಗೌಡ ತಿಳಿಸಿದ್ದಾರೆ.

<><><>

ಕರಾವಳಿ ಹಾಗೂ ದಕ್ಷಿಣ ಒಳನಾಡಿನಲ್ಲಿ ರಭಸದ ಮಳೆ ಮುಂದುವರೆದಿದೆ. ಇದೇ 23ರ ವರೆಗೆ, ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಉತ್ತರಕನ್ನಡ, ಉಡುಪಿ, ದಕ್ಷಿಣಕನ್ನಡ, ಚಿಕ್ಕಮಗಳೂರು ಹಾಗೂ ಕೊಡಗು ಜಿಲ್ಲೆಗಳಲ್ಲಿ ಧಾರಾಕಾರ ಮಳೆಯಾಗಲಿದ್ದು, ಇದೇ 21ರ ವರೆಗೆ, ಆರೇಂಜ್ ಅಲರ್ಟ್ ಘೋಷಿಸಲಾಗಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ರಾಣಿ ಚನ್ನಮ್ಮನವರ, ಕಿತ್ತೂರು ಕೋಟೆ ಆವರಣದಲ್ಲಿ, ಥೀಮ್ ಪಾರ್ಕ್; ಸಚಿವ ಸಂಪುಟ ಅನುಮೋದನೆ.
- 'ಸ್ವಚ್ಛ ಸರ್ವೇಕ್ಷಣ ಅಭಿಯಾನ'; ಮೈಸೂರು, ರಾಷ್ಟ್ರಕ್ಕೆ ಮೂರನೇ ಸ್ಥಾನ; ರಾಜ್ಯದ ಭರವಸೆಯ ಸ್ವಚ್ಛ ಶಹರ, ದಾವಣಗೆರೆ.
- ಅಮೃತ ಭಾರತ ಯೋಜನೆ; ಸ್ವಾತಂತ್ರ್ಯ ಪೂರ್ವದ, ದೊಡ್ಡಬಳ್ಳಾಪುರ ರೈಲು ನಿಲ್ದಾಣ, ಮೇಲ್ದರ್ಜೆಗೆ.
- ಗಂಗಾವತಿ ತಾಲೂಕು, ಬೆಣಕಲ್ಲ ಗ್ರಾಮದ, ಕತ್ತೆಕಲ್ಲು ಗುಡ್ಡದಲ್ಲಿ, ತಾಮ್ರ ಯುಗದ ಕುರುಹು ಪತ್ತೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>